ಸೂರು ಎಕರೆಗೆ ಮಾತ್ರ ನೀರಿದೆ ಇನ್ನು ಹೆಚ್ಚಿನ ಒಂದು ಸಾವಿರ ಎಕರೆಗೆ ಏನಾದರೂ ನೀರಿನ ವ್ಯವಸ್ಥೆ ಮಾಡಬೇಕೆಂದು ಅದಕ್ಕಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ೪ ಲಕ್ಷ ಚಿಲ್ಲರೆಯಷ್ಟು ಈ ಒಂದು ಸಣ್ಣ ನೀರಾವರಿ ಯೋಜನೆಗಾಗಿ ಕಾರ್ಯಕ್ರಮ ಸಿದ್ಧಪಡಿಸಿ ಸಂಬಂಧಪಟ್ಟ ಇಲಾಖೆಯವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಅಲ್ಲಿ ಮಂಜೂರಾತಿ ಸಿಕ್ಕಕೂಡಲೇ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಿಕ್ಕೆ ಸಾಧ್ಯತೆ ಇದೆ.

ಶ್ರೀ ಎನ್. ಬಸವಯ್ಯ —ಅಲ್ಲಿ ಒಟ್ಟು ೮೩ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡಲಾಗಿದೆಂದು ಹೇಳಿದ್ದೀರಿ ಅವರಲ್ಲಿ ಇಬ್ಬರಿಗೆ ಮಾತ್ರ ಉದ್ಯೋಗ ಕೊಡಲಾಗಿದೆಂದು ಹೇಳಿದ್ದೀರಿ. ಬಾಕಿಯವರಿಗೆ ಆ ಫಾರಂನಲ್ಲಿ ಕೆಲಸ ಮಾಡತಕ್ಕಂಥದಕ್ಕೆ ಬೇಕಾದಷ್ಟು ಅವಕಾಶವಿದೆ. ಆದುದರಿಂದ ತಾವು ಅವರಲ್ಲಿ ಒಂದು ವರ್ಷಾನೇ ಭಾಗದಷ್ಟು ಜನರಿಗಾದರೂ ಡಿಪ್ಲೊಮಾ ಮಾಡಿದರೆ ತೆಂಗಿನ ತಳಿಗಳ ಅಭಿವೃದ್ಧಿಗೂ ಪ್ರಯೋಜನವಾಗುತ್ತದೆ ಎನ್ನುತಕ್ಕಂಥ ದೃಷ್ಟಿಯಿಂದ ಅವರಿಗೆ ಆ ಉದ್ಯೋಗವಕಾಶಗಳನ್ನು ಕಲ್ಪಿಸಿ ಕೊಡುತ್ತೀರಾ ?

ಶ್ರೀ ಕೆ. ಟಿ ರಾಠೋಡ್.—ಹಣಕಾಸಿನ ಕೊರತೆ ಇರುವುದರಿಂದ ಸದ್ಯಕ್ಕೆ ಇಬ್ಬರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ ಅವಕಾಶ ಸಿಕ್ಕಿದ ಹಾಗೆ ಉದ್ಯೋಗ ಒದಗಿಸಿಕೊಡುತ್ತೇವೆ. ಎಲ್ಲಾ ತರಪೇತಿ ಹೊಂದಿದವರಿಗೆ ಕೊಡಬೇಕು ಎನ್ನುತಕ್ಕಂಥ ತಮ್ಮ ಉದ್ದೇಶವನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಟಿ ತಾರೀಹಾಳ.—ಸ್ವಾಮಿ ಈ ಒಳ್ಳಾರದ ಫಾರಂನಲ್ಲಿ ನೀರಿನ ತೊಂದರೆ ಇದೆ ಎಂದು ತಿಳಿಸಿದ್ದೀರಿ. ಇದರಲ್ಲಿ ಹಲಸು, ಮಾವು ಸೀಬು ಇವುಗಳನ್ನಾದರೂ ಬೆಳೆಸಿದರೆ, ಇವುಗಳಿಗೆ ಜಾಸ್ತಿ ನೀರು ಬೇಕಾಗುವುದಿಲ್ಲ, ಆದುದರಿಂದ ಇಂಥ ಫಲವೃಕ್ಷಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ ಟಿ ರಾಠೋಡ್.—ಸದ್ಯಕ್ಕೆ ನೀರಿನ ವ್ಯವಸ್ಥೆ ಮಾಡಿಸುತ್ತೇವೆ, ೧೦ ಹಾರ್ಸ್ ಪವರ್ ಪಂಪ್ ಸೆಟ್ ಹಾಕತಕ್ಕಂಥ ಯೋಜನೆ ಮಾತಿಕೊಂಡಿದ್ದೇವೆ ಇನ್ನೊಂದು ಸಾವಿರ ಎಕರೆಯಲ್ಲಿ ಕೋಕನಟ್ ಬೆಳೆಸುವುದು ಇದೆ ಬಾಕಿ ಕಚ್ಚಿನ ಜಮೀನಿನಲ್ಲಿ ಇನ್ನು ಇತರೆ ಫಲಗಳನ್ನು ಬೆಳೆಸುವುದೂ ಇದೆ. ಈಗ ಸದ್ಯದ ಕಾರ್ಯಕ್ರಮದಲ್ಲಿ ಈ ಬೆಳೆಯನ್ನು ಕೂಡ ಈಗಾಗಲೇ ಬೆಳೆಸುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎನ್. ಬಸವಯ್ಯ.—ಮೊನ್ನೆ ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿಯ ಅಧಿಕಾರಿಗಳು ಹೇಳುತ್ತಿದ್ದರು, ಈಗ ಇಟ್ಟಿರತಕ್ಕಂಥ ತಳಿಗಳಿಗೆ ನೀರಿನ ತೊಂದರೆ ಹಚ್ಚಾಗಿದೆ. ಅನೇಕ ತೆಂಗಿನ ತಳಿಗಳು ಹೊಟ್ಟು ಹೋಗುತ್ತಿವೆ ಎಂದು ಹೇಳಿದರು ಆದುದರಿಂದ ತಾವು ನೀರಿನ ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕೆಂದು ಹೇಳುತ್ತೇನೆ ನೀರಿನ ಅವಶ್ಯಕತೆಯನ್ನು ಕಲ್ಪಿಸುವುದಕ್ಕೆ ಸಾಧ್ಯತೆ ಇರುವುದರಿಂದ ತಾವು ಅದರ ಕಡೆಗೆ ಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಟಿ. ರಾಠೋಡ್ —ಈ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು, ನಿಮಗೇ ಗೊತ್ತಿರುವ ಹಾಗೆ ೫ ವರ್ಷಗಳಲ್ಲಿ ಪೂರ್ತಿಯಾಗಿ ಈ ಫಾರಂನಲ್ಲಿ ಬೆಳೆಸಬೇಕು ಎಂದು ಹೇಳಿ ಕಾರ್ಯಕ್ರಮ ತೆಗೆದುಕೊಂಡಿದ್ದು, ಆದರೆ ಈ ನೀರಿನ ಕೊರತೆ ಬಂದಮೇಲೆ ಬಳವಣಿಗೆ ಸ್ವಲ್ಪ ಅಡಚಣೆಯಾಗಿದೆ ನಿಮಗೆಷ್ಟು ಇದರ ಬಗ್ಗೆ ಕಾಳಜಿ ಇದೆಯೋ ನಮಗೂ ಅಷ್ಟು ಕಾಳಜಿ ಇದೆ. ನೀರಿನ ಪೂರೈಕೆ ಆದರೆ ಕೋಕನಟ್ ಬೆಳೆಯನ್ನು ಪೂರ್ತಿಯಾಗಿ ಇಟ್ಟಾಗ ಈ ಫಾರಂ ಇತೀ ನಮ್ಮ ರಾಜ್ಯಕ್ಕೇ ಒಂದು ಮಾದರೀ ಫಾರಂ ಆಗಿ ಮಾಡುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ

* *Grant to Karnatak University to Survey Epigraphy*

476 SRI M. M. SAJJAN (Muddebihal).—Will the Minister for Education be pleased to state.—

(*a*) the amount granted to the University of Mysore during the last five years for republiction and reprinting of epigraphy.

(*b*) whether the Government is aware of the proposal submitted by the Karnataka University to the Government requesting sanction for the grant for conducting epigraphical survey of the nine districts under its jurisdication for publishing. printing of the epigraphical literature.

(*c*) if so, the action taken by the Government in the matter.

(*d*) whether the Government is aware that a number of Legislators of North Karnataka area have represented to the Government requesting to accept the proposal of the Kannada Department of Karnataka University and to grant the amount for their schemes.

(*e*) if so, the action taken by the Government in the matter ?

SRI M. MALLIKARJUNASWAMY (Minister for Eduction).—

(*a*) Rs, 2.50 lakhs during the year 1971-72 only.

(*b*) Yes.

(*c*) The Karnataka University was imformed in March 1974, that the proposal is not acceptable to Government in view of the difficult financial position and the economy orders.

(*d*) Yes.

(*e*) A reply has been issued in July 1974, stating that a seheme for conducting Epigraphical Surveys in 9 Districts of Karnataka (viz., Districts of Bidar, Gulbarga, Raichur, Bellary, Dharwar, Bijapur, Belgaum, Karwar and South Kanara) by the Department of Archaeology has been included in the V Five Year Plan, that proposals received in this behalf from the Director of Archaeology for implementing the scheme are at present under the consideration of Government, that conducting of such surveys is the legitimate and primary function of the Department of Archaeology and that, therefore, the question of entrusting the survey work to the Karnataka University may not arise.

ಶ್ರೀ ಎಂ. ಎಂ. ಸಜ್ಜನ್.—ಸ್ವಾಮಿ ಈ ಶಿಲಾ ಶಾಸನದ ಬಗ್ಗೆ ಎಷ್ಟೋ ಲಕ್ಷ ರೂಪಾಯಿಗಳನ್ನು ಮೈಸೂರು ಮತ್ತು ಬೆಂಗಳೂರು ವಿಶ್ವ ವಿದ್ಯಾನಿಲಯದವರಿಗೆ ಕೊಟ್ಟಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಏನೂ ಕೊಟ್ಟಿಲ್ಲ. ಆದರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿರ್ದಿಷ್ಟ ಈ ಇಷ್ಯೆಯಲ್ಲಿ ಜಿ ಸಿ ರೈಟ್ಸ್ ಶಿಲಾ ಶಾಸನಕ್ಕೆ ಸಂಬಂಧ ಪಟ್ಟಂತೆ ೧೩ ಗ್ರಂಥಗಳನ್ನು ಅವರು ಬರೆದಿದ್ದರು, ಇವರಲ್ಲಿ ಎರಡು ಗ್ರಂಥಗಳನ್ನು ರೀಪ್ರಿಂಟಿಂಗ್ ಮಾಡುವುದಕ್ಕೆ, ರಿವೈಜ್ ಮಾಡುವುದಕ್ಕೆ ೨.೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ ಎಂ. ಸಜ್ಜನ್.—ಸ್ವಾಮಿ ನಾನು ಕೇಳಿದ್ದು, ರೀ ಪ್ರಿಂಟಿಂಗ್ ಮತ್ತು ರೀ ಪಬ್ಲಿಕೇಷನ್ ಬಗ್ಗೆ ಅಲ್ಲ. ಈ ಶಿಲಾ ಶಾಸನದ ಸಮೀಕ್ಷೆ ಮಾಡುವುದಕ್ಕಾಗಿ, ಎಪಿಗ್ರಾಫಿಕಲ್ ಸರ್ವೇ ಇವರ ಬಗ್ಗೆ ಬೆಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಎಷ್ಟು ಲಕ್ಷ ದುಡ್ಡನ್ನು ಸರ್ಕಾರ ಒದಗಿಸಲಿದೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಸರ್ವೆ ಮಾಡುವುದಕ್ಕೆ ಹಣವನ್ನು ಕೊಟ್ಟಿಲ್ಲ.

ಶ್ರೀ ಎಂ. ಎಂ. ಸಜ್ಜನ್.—ಸ್ವಾಮಿ ಈ ೯ ಜಿಲ್ಲೆಗಳೆಂದು ತಾವು ಉತ್ತರ ಕೊಡುವಾಗ, ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರತಕ್ಕಂಥ ಶಿಲಾ ಶಾಸನ ಸಾಹಿತ್ಯ, ಬಾಕಿ ಜಿಲ್ಲೆಗಳಿಗಿಂತಲೂ ಈ ೯ ಜಿಲ್ಲೆಗಳಲ್ಲಿ ದುಪ್ಪಟ್ಟು ಶಿಲಾಶಾಸನ ಸಾಹಿತ್ಯ ಇದೆ ಎನ್ನತಕ್ಕಂಥದ್ದು ಮಾನ್ಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಸರ್ಕಾರದ ಗಮನಕ್ಕೆ ಬಂದಿದೆ. ನಮ್ಮ ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿನಲ್ಲಿ ಫುಲ್ ಟೈಮ್ ಡೈರೆಕ್ಟರ್ ಒಬ್ಬರು ನಮ್ಮ ಇಲಾಖೆಯವರು ಇದ್ದಾರೆ, ಅವರು ತಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಲಸಗಳನ್ನು ಮಾಡಿಸುತ್ತಾರೆ.

ಶ್ರೀ ಎಂ. ಎಸ್. ಸಜ್ಜನ್:—ಇದುವರೆಗೆ ಎಷ್ಟೋ ಪಂಚವಾರ್ಷಿಕ ಯೋಜನೆಗಳು ಆದವು. ಆ ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಈ ೯ ಜಿಲ್ಲೆಗಳಲ್ಲಿ ಶಿಲಾ ಶಾಸನ ಸಾಹಿತ್ಯ ಸಮೀಕ್ಷೆಯನ್ನು ಇದುವರೆಗೆ ಏತಕ್ಕೆ ಮಾಡಲಿಲ್ಲ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ ಮಾತಿಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ.

Restriction Over Urban Land Ceiling

513. SRI PRABHAKAR TELKAR (Kanagi).—

Will the Minister for Revenue be pleased to state:—

(a) whether the Government has any proposal to impose restriction over the Urban Land Ceiling;

(b) whether the central Government has given any directives for stopping the transfer of big landed properties in the Urban Area;

(c) if. so, whether the Government has taken any steps to stop the transfer of properties in Urban Area ?

SRI N. HUTCHAMASTHY GOWDA:—(Minister for Revenue)

(a) Yes. For securing uniformity in legislation relating to imposition of ceiling on Urban Immovable property, the State Legislature passed resolutions in December 1972 leaving it to the Central Government to regulate the subject by passing of a Law by Parliament.

(b) The Central Government have not given any directive, but they have left it to the State Government to consider the desirability of having a legislation prohibiting alienation of Urban vacant lands/ property pending legislation imposing a ceiling on Urban property.

(c) No further steps have been taken since December, 1972, but the question is now under examination of Government in view of a very recent communication from the Government of India.

SRI PRABHAKAR TELKAR —In answer to (a), may I know whether the State Government has sent any proposals to the Central Government, and if so, the salient features of the same ?

† ಶ್ರೀ ಎನ್. ಹುಚ್ಚಮಾಸ್ತಿಗೌಡ:—ನಾವು ಅಧಿಕಾರವನ್ನು ಅವರಿಗೆ ಮಹಜರ್ ಕೊಟ್ಟಿದ್ದೇವೆ.

SRI PRABHAKAR TELKAR:—In answer to (b) and (c), may I know whether the Government has taken any steps in this regard ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಇದನ್ನು ಪರ್ಯಾಲೋಚನೆ ಮಾಡಬೇಕು ಎಂದು ಟೀನೇ ಜನವರಿ ೧೯೭೫ರಲ್ಲಿ ಪತ್ರ ಬರೆದಿದ್ದಾರೆ. ಈಗ ಅದು ಸರ್ಕಾರದ ಪರ್ಯಾಲೋಚನೆಯಲ್ಲಿ ಇದೆ.